# ಶಾಮಸುಂದರವಿಠಲರು

Contributed by Sri Pranesh Hejjib Bangalore

೧

ಶ್ರೀಗಣಪತಿ

ಆರಂಭದಲಿ ನಮಿಪೆ ಬಾಗಿ ಶಿರವ

ಹೇರಂಬ ನೀನೊಲಿದು ನೀಡೆನಗೆ – ವರವ ಪ

ದ್ವಿರದ ವದನನೆ ನಿರುತ । ದ್ವಿರದ ವರದನ ಮಹಿಮೆ

ಹರುಷದಲಿ ಕರಜಿಹ್ವೆ ಎರಡರಿಂದ

ಬರೆದು ಪಾಡುವದಕ್ಕೆ । ಬರುವ ವಿಘ್ನನವ ತರಿದ

ಕರುಣದಿಂದಲಿ ಎನ್ನ ಕರಪಿಡಿದು ಸಲಹೆಂದು ೧

ಕುಂಭಿಣಿಜೆ ಪತಿ ರಾಮ । ಜಂಭಾರಿ ಧರ್ಮಜರು ।

ಂಬರಾಧಿಪ ರಕುತಾಂಬರನೆ ನಿನ್ನ ॥

ಸಂಭ್ರಮದಿ ಪೂಜಿಸಿದರೆಂಬವಾರುತಿ ಕೇಳಿ

ಂಬಲವ ಸಲಿಸೆಂದು । ನಂಬಿ ನಿನ್ನಡಿಗಳಿಗೆ ೨

ಸೋಮಶಾಪದ ವಿಜಿತ । ಕಾಮ ಕಾಮಿತ ದಾತ

ವಾಮ ದೇವನ ತನಯ ನೇಮದಿಂದ

ಶ್ರೀಮನೋಹರನಾಥ ಶಾಮಸುಂದರ ಸ್ವಾಮಿ

ನಾಮನೆನೆಯುವ ಭಾಗ್ಯ ಪ್ರೇಮದಲಿ ಕೊಡು ಎಂದು ೩

೧

ಅಂಗನೇರು ಕೂಡಿ ಸ್ವರ ಸಂಗೀತದಿಂದಲೀಗ
ಗಂಗಜನಕ ಚಾರು ಚರಣಕೆ ಹರುಷದಿಂ ಬೇಗ
ಮಂಗಳಾತ್ಮಕನಾದ ಶ್ರೀ ನರಶಿಂಗ ರಾಯನಿಗೆ
ಶೃಂಗಾರದಿಂ ಜಯಮಂಗಳವೆಂದು ಪಾಡಿರೆ ೧
ದೀನ ಜನರುದ್ಧಾರಗೈಯುವ ದಾನವಾಂತಕಗೆ
ನೀನೆ ಗತಿಯೆಂದ ಮಾನಿನಿಯಳ ಮಾನ ಕಾಯ್ದವಗೆ
ಸಾನುರಾಗದಿ ಧ್ಯಾನಿಸುತಲಿ ಶ್ರೀನಿವಾಸನಿಗೆ
ಬಲು ಛಂದದಿ ಜಯ ಮಂಗಳವೆಂದು ಪಾಡಿರೌ ೨
ಪೊಂದಿದ ಜನರನು ತ್ವರದಿ ಪೊರೆಯುವ
ನಂದಕಂದನಿಗೆ । ವಂದಿಸಿ ಕರುಣದಿ
ಇಂದು ಮುಖಿಯರು ಸಿಂಧು ಶಯನಗೆ । ಆನಂದದಿಂದಲಿ
ಶ್ರೀ ಶಾಮಸುಂದರಗೆ ಘನ ಮೋದದಿಂ
ಜಯ ಮಂಗಳವೆಂದು ಪಾಡಿರೌ ೩

೨

ಶ್ರೀ ಮಹಾದೇವರು

ಅಂಬಿಕಾಪತಿ ಶಂಭು ರಕ್ಷಿಸೆನ್ನ
ಶಂಬರಾರಿ ಹರನೆ ನಂಬಿದೆನೊ ನಿನ್ನ ಪ
ಭವಕಮಲ ಭವ ಭ್ರಕುಟ ಭವಹರನೆ ನೀಎನ್ನ
ಅವಗುಣಗಳೆಣಿಸದಿರು ಕವಿಗೇಯನೆ ॥
ಅವನಿಯೊಳು ಎನಗೀಗ ಸುವಿವೇಕಿಗಳ ಸಂಗ
ಜವದಿ ಪಾಲಿಸು ಮುದದಿ ಜವನಾರಿ ಶಿವನೆ ೧

ಬಲವಿರೋಧಿ ವಿನುತ  ಇಳೆವರೂಥನೆ ನಿರುತ
ತಲೆವಾಗಿ ಬೇಡುವೆನು ಸಲಹೆಂದು ನಾ
ಎಲರುಣಿ  ಭೂಷಣೆನೆ ಒಲಿದು ಪಾಲಿಸುದಯದಿ
ಛಳಿಗಿರೀಶನ ಅಳಿಯ ನಳಿನಾರಿ ಧರನೆ ೨
ಸಿರಿರಮಣ ಶಾಮಸುಂದರ ವಿಠಲ ಸಖನೆ
ಮೊರೆ ಹೊಕ್ಕೆ ಮರೆಯದಿರು ಗರಗೊರಳನೆ
ಕರುಣದಿಂದಲಿ ನಿನ್ನ ಚರಣ  ಸೇವೆಯನಿತ್ತು
ಕರವಿಡಿದು ಕಾಪಾಡೊ ಕರಿಚರ್ಮಧರನೆ ೩

೩

ಅಡವಿನಿಲಯ ನಿನ್ನಡಿಗೆರಗುವೆ ಕರ ಪಿಡಿದು ಪಾಲಿಸಯ್ಯ ಪ
ಮೃಡನುತ ಭಾರತಿ ಒಡೆಯನೆ ಪ್ರಾರ್ಥಿಪೆ ।
ಬಿಡಿಸು ಭವದ ಮಾಯಾ ಅ.ಪ
ನಿನ್ನ ದರುಶನದಿ ಎನ್ನ ಜನ್ಮ ಪಾ ।
ವನ್ನ ವಾಯಿತಯ್ಯ ।
ನಿನ್ನನುಗ್ರಹಪಡೆದ ಸಂ ।
ಪನ್ನರೊಳಿಡು ಜೀಯಾ ೧
ತರುಚರನರದ್ವಿಜ । ವರರೂಪತ್ರಯ ।
ಧರಿಸಿದಂಥ ದೇವ ॥
ದುರುಳ ದೈತ್ಯ ಪರಿವಾರ ಗರ್ವಹರ
ಶರಣರ ಸಂಜೀವಾ ೨

ಸೃಷ್ಟಿಯೊಳಗೆ ಅತಿ ಶ್ರೇಷ್ಟನೆಂದೆನಿಸಿದ ।
ಕುಷ್ಟಗಿ ಮೂರುತಿ ಪುರವಾಸ
ಧಿಟ್ಟ ಮೂರುತಿ ಶಾಮಸುಂದರ
ವಿಠಲ ಪ್ರಿಯದಾಸ ೩

೪

ಅರಿತವರನ ಕಾಣೆ ನಿನ್ನ । ಕಾಣೆ ನಿನ್ನ ದೇವ
ಅರವಿದೂರನೆ ತವ ಮಹಿಮೆಯು ಘನ್ನ ಪ
ಬಂಡಿಕಾಲನು ಪಿಡಿದೆಯಂತೆ । ಹತ್ತು
ಬಂಡಿರಾಯಗೆ ಸುತ ನೀನಾದಿಯಂತೆ
ಬಂಡಿ ಅಸುರನ ಕೊಂದಿಯಂತೆ । ಧುರದಿ
ಬಂಡಿ ನಡಸಿ ನರನ ಸಲಹಿದೆಯಣತೆ ೧
ತಂದೆ ತಂದೆಗೆ ತಂದೆಯಂತೆ । ಜಗದ
ತಂದೆ ನಿನಗೆ ತಂದೆ ತಾಯಿಗಳಂತೆ
ತಂದೆ ವಿಪ್ರಜರ ನೀನಂತೆ । ಸ್ವಾಮಿ
ತಂದೆ ನೃಪಾಲನ ಸುತೆಗೀಶನಂತೆ ೨
ಸಿಂಧೂರದ್ವಯ ವರದನಂತೆ । ಮಧ್ಯ
ಸಿಂಧೂರವದನವು ನಿನಗಿಹುದಂತೆ
ಸಿಂಧು  ಮಂದಿರ ನಿನಗಂತೆ ಶಾಮ
ಸುಂದರ ನಿನಗೆ ಭಕ್ತರ ಚಿಂತೆಯಂತೆ ೩

೫

ಆನಂದ ಆನಂದ ಪ್ರದವ್ರೋದಾಶರಥಿ ಧ್ಯಾನಾ ಪ
ಭಕ್ತಿಯುಕ್ತನಾಗಿ ಮನದಿ ನಿತ್ಯಪಾಡೋ ರಾಮಚರಣ ಅ.ಪ
ಕಾಲನಪುರ ಭಯವಿಲ್ಲವ್ರೋ । ವಾಲ್ಮೀಕಿಯು ಸಾಕ್ಷಿ ಇದಕೆ
ಬಾಲಧ್ರುವನು ವನದಿ ಭಜಿಸಿ
ಮೇಲುನಭದಿ ಮೆರೆವಾ ನೋಡೋ ೧
ಶ್ರೀರಾಮನಾಮದಿಂದ ಮಾರುತಿಯು ಬ್ರಹ್ಮನೆ ನಿಪ
ಮಾರಹರನು ತನ್ನ ಸತಿಯಾ ಸೇರಿ ಸತತ ಭಜಿಪ ಕೇಳೋ ೨
ಹಿಂದೆ ಮಾಡಿದ ನಿನ್ನ ದುರಿತವೃಂದವೆಲ್ಲ । ಛೇದಿಸುವದು
ಒಂದೆ ಭಾವದಿಂದ ಶಾಮಸುಂದರನ ನಾಮ ಪಾಡೋ ೩

೭

ಆರುತಿ ಬೆಳಗುವೆವು ಕೃಷ್ಣಗೆ
ರಾಧಾಕೃಷ್ಣಗೆ ಬೆಳಗುವೆವು ಪ
ಗೋಕುದಲಿ ಹುಟ್ಟಿ । ಗೋವುಗಳನು ।
ಕಾಯ್ದವಗೆ ಗೋಪಾಲಕೃಷ್ಣಗೆ ಬೆಳಗುವೆವು ೧
ನಂದಕುಮಾರನಿಗೆ ಇಂದೀವರಾಕ್ಷ ಬಾಲನಿಗೆ ।
ರಾಧಾಕೃಷ್ಣಗೆ ಬೆಳಗುವೆವು ೨
ಶಾಮಸುಂದರನಿಗೆ ಕಾಮಿತಶೀಲ
ಕೃಷ್ಣನಿಗೆ ರಾಧಾಕೃಷ್ಣಗೆ ೩

೮

ಆರುತಿ ಬೆಳಗೆ । ವಾರಿಧಿ ಸುತಿಗೆ
ಸಾರ ಸಂಗೀತದಿಂದಲಿ ಪ
ಸಕಲ ವಸ್ತುವೆನಿಸಿ ಮುಕುತಿದಾಯಕ ಹರಿಗೆ
ಭಕುತಿಯಿಂದಲಿ ಬಿಡದೆ । ಸದಾಪೂಜಿಪ ಸಿರಿಗೆ
ವಿಖನ ಸಾದ್ಯಮರ ಗಣಕೆ । ಸುಖ ಕೊಡುವಳಿಗೆ
ಮಕರಧ್ವಜನ ಮಾಲೆಯಾದ ರುಕುಮನನುಜಗೆ ೧
ಚಾರುಶ್ರಾವಣ ಭಾರ್ಗವ ಶುಭವಾರದ ದಿನದಿ
ಭೂರಿ ಭಕ್ತ ಭರಿತಳಾಗಿ ನಮಿಸುತ ಮನದಿ ನೀ
ಆರಾಧಿಸೆ ಷೋಡಶ ಉಪಚಾರದಿ ಮುದದಿ
ಕೋರಿಕೆಯನು ಗರೆಯುವ ವರಲಕ್ಷ್ಮಿಗೆ ಜಯದಿ ೨
ತಾಮರಸ ಸುಧಾಮಳಾದ ಸೋಮವದನಿಗೆ
ಗೋಮಿನಿ ಸೌದಾಮಿನಿ ಸಮ ಕೋಮಲಾಂಗಿಗೆ
ಶಾಮಸುಂದರ ಸ್ವಾಮಿಯ ಸುಪ್ರೇಮದ ಸತಿಗೆ
ಕಾಮಿತ ಫಲದಾಯಿನಿ ಶ್ರೀ ಭೂಮಿಜೆ ರಮಗೆ ೩

೯

ಆರುತಿ ಮಾಡೆವೆವು ನಾವು
ಆನಂದನಿಲಯಗೆ ಆನಂದದಿಂದಲಿ ಪ
ಗೋಕುಲದಲಿ ಪುಟ್ಟಿ ।
ಗೋವುಗಳನೆ ಕಾಯ್ದ ಗೋಪಾಲಕೃಷ್ಣನಿಗೆ ೧

ನಂದಕುವರಗೆ । ಸಿಂಧುಶಯನಗೆ ।
ಇಂದೀವರಾಕ್ಷನಿಗೆ ನಾವು ೨
ಶಾಮಸುಂದರಗೆ ದಾಮೋದರನಿಗೆ ।
ಪ್ರೇಮದಿಂದಲಿ ಶ್ರೀ ಕಮಲಾಕ್ಷಗೆ ೩

೧೦

ಆರುತಿಯ ತಾರೆ ಸಖಿ ।
ನೀರಜಾಕ್ಷಿ ವಾರುಣೀಶನಿಗೆ ಪ
ವಾರಿಚರಗಿರಿಧಾರ ಹರಿ ಗೋಚರ ಹರಿ ।
ನರಸಿಂಹಗೆ ಮೂರಡಿ ಧಾರುಣಿ ದಾನವ ಬೇಡಿದವಗೆ ೧
ದಾಶರಥಿದಾಸ ಹರಿಕೃಷ್ಣಗೆ ವಸನವರ್ಜಿತ
ಕಲ್ಕಿಗೆ ಶ್ರೀಶನಿಗೆ ಸರ್ವೇಶನಿಗೆ ವಾಸುಕಿಗಿರಿ ವಾಸನಿಗೆ ೨
ಸಾಮಗಾನ ವಿಲೋಲಗೆ ಶಾಮಸುಂದರವಿಠಲಗೆ ।
ರಾಮಗೆ ನಿಸ್ಸೀಮಗೆ । ಕಾಮಿತಾರ್ಥಪ್ರದಾತಗೆ ೩

೧೧

ಆರುತಿಯ ತಾರೆ ಹರಿಗೆ ।
ರಾಧಾಕೃಷ್ಣಗೆ ಶ್ರೀಹರಿಗೆ ಪ
ಬೆಟ್ಟವ ಎತ್ತಿದವಗೆ ಪುಟ್ಟಸೀತೆಯಚಿಡ
ತಂದ ಹರಿಗೆ । ಶ್ರೇಷ್ಟ ರಾಮನಿಗೆ ಶ್ರೀಹರಿಗೆ ೧

ಅಮಿತ ಕರುಣಾಶಾಲಿಗೆ ವಿಮಲ
ಸುಜನ  ಪಾಲನಿಗೆ ಕಮಲನಾಭನಿಗೆ ಶ್ರೀಹರಿಗೆ ೨
ಶಂಖಚಕ್ರಧಾರನಿಗೆ ಪಂಕಜಾಕ್ಷ
ಕೃಷ್ಣನಿಗೆ ಶಾಮಸುಂದರ ವಿಠಲನಿಗೆ ಶ್ರೀ ಹರಿಗೆ ೩

೧೨

ಶ್ರೀ ರಾಘವೇಂದ್ರರು
ಇಂಥಾ ಗುರುಗಳ ಕಾಣೆನಾ । ಭೂತಳದೊಳು
ಇಂಥಾ ಯತಿಗಳ ಕಾಣೆನಾ ಪ
ಇಂಥ ಗುರುಗಳ ಕಾಣೆ  ಮಂತ್ರ ಮಂದಿರದಲ್ಲಿ
ನಿಂತು ಭಜಕರಿಗೆ । ಚಿಂತೆ ಕಳೆವ ಕರುಣಿ ಅ.ಪ
ದೇವಸ್ವಭಾವನೀತನು । ಸತತ ಪವನ
ದೇವನಾವೇಶಯುಕ್ತನು ॥
ಆವ ಸಂಶಯವ್ಯಾಕೆ । ದೇವಾಧಿದೇವ ನರಮೃಗ
ದೇವನೀತನ ಭಕ್ತಿಗೆ । ಧಾವಿಸಿ ಬಂದ ಸ್ತಂಭದಿ
ಭಾವ ಭಕ್ತಿಯಲಿ । ಸೇವಿಪರಿಗೆ ಭವ
ನೋವು ಕಳೆದು ಸುರ । ಗೋವಿನ ತೆರ ವರ
ವೀವನು ಕರುಣದಿ । ಕಾಮನು ಪರಮ
ಪಾವನ ಚರಿತನು । ಕೋವಿದರೊಡೆಯನು ೧
ವರಹಜ ತಟದಲ್ಲಿರುವ ಭಕ್ತರು ಕೂಗಿ
ಕರೆದಲ್ಲಿಗೋಡಿ ಬರುವ ।

ಮರುತ ಶಾಸ್ತ್ರದ ಮರ್ಮ ಭರಿತವಾದಂಥ ದಿವ್ಯ
ಪರಿಮಳ ಗ್ರಂಥವ ವಿರಚಿಸಿ ಬುಧರಿಗೆ
ಗರೆದನು ಕರುಣದಿ ಪೊರೆದನು ಪರಮತ
ಮುರಿದನು ಜಗದೋಳ್ ಮೆರೆದನು ಹೊಸ ಹೊಸ
ಪರಿ ಸುಮಹೋತ್ಸವ ಹರುಷದಿ ಪ್ರತಿದಿನ
ಗುರು ಸುಯಮೀಂದ್ರರ । ಕರದಿಂಗೊಂಬರು ೨
ಮಂದಹಾಸನ ಶ್ರೀ ಶಾಮಸುಂದರ
ರಂಘ್ರಿ ಸೇವಕ ।
ಕಂದರ್ಪಶರಕರಿ ವೃಂದ ಕೇಸರಿ ಎನಿಸಿ
ಗಂಧವಾಹನ ಮತ । ಸಿಂಧುವಿಗೆ ಶಶಿ
ಯಂದದಿ ರಾಜಿಸಿ ವೃಂದಾವನವನು
ಒಂದೆ ಮನದಲಿ ವಂದಿಸಿ ನಮಿಸುವ
ವಂದ್ಯಾಂಧಕರಿಗೆ । ಕಂದರಕ್ಷಿಗಳ
ಕುಂದದಿ ಕೊಡುವ । ಕರ್ಮಂದಿ ಕುಲಾಗ್ರಣಿ ೩

೧೩

ಇಂದಿರೆ ಮಜ್ಜನನಿಯೆ । ಇಂದಿರೆ ಪ
ಇಂದಿರೆ  ಸಿಂಧು ಸಂಭೂತೆ । ಪೂರ್ಣ
ಚಂದಿರ ಮುಖಿ ಸುಖದಾತೆ ಅ.ಪ
ಇಂದೀವರಾಕ್ಷಿಯೆ । ಪೊಂದಿ ತ್ವತ್ಪಾದಕೆ
ವಂದಿಪೆ ಮನ್ಮನ ಮಂದಿರದೊಳು ಬಾರೆ ॥
ಕೃತಿ ಶಾಂತಿ ಜಯಮಾಯೆ ಸೀತೆ ದೇವಿ

ಪತಿತಪಾವನೆ ಕ್ಷಿತಿಜಾತೆ । ವಿಧಿ
ಶಿತ ಕಂಧರಾದಿ ನಮಿತೆ । ಮಹ ।
ಪತಿವ್ರತೆ ಪರಮವಿಖ್ಯಾತೆ ಆಹಾ
ಶೃತಿವಿನುತಳೆ ಸದಾ । ನುತಿಸಿ ಬೇಡಿ ಕೊಂಬೆ
ಅತಿಹಿತದಲಿ ತವ ಪತಿಯ ಪಾದವ ತೋರೋ ೧
ಹರಿಣಲೋಚನೆ । ಶ್ರೀರುಕ್ಮಿಣೀ । ಮದ
ಕರಿ ಮಂದಗಮನೆ ಕಲ್ಯಾಣಿ ದ್ವಿಜ
ಪರಿವಾರ ಸಂಸ್ತುತೆ ಜಾಣೆ । ಚಾರು
ಚರಿತೆ ಚಂಚರೀಕ ಸುವೇಣಿ ॥ ಆಹಾ ॥
ಸಿರಿ ಸತ್ಯಭಾಮೆಯ । ಮರೆಯದೆ ಎನ್ನಯ
ದುರಿತ ವಿಚ್ಛೇದಿಸಿ । ಹರಿಸ್ಮರಣೆ ನೀಡೆ ೨
ಕುಂದರದನ ಲಕುಮಿಯೆ । ಕಂಬು ಕಂಧರೆ
ಕಾಮನ ತಾಯೆ ಅರ
ವಿಂದ ಸದನೆ ಜಾನಕಿಯೆ । ಭವ
ಬಂಧನ ಬಿಡಿಸಿ ಕರಪಿಡಿಯೆ ಆಹಾ
ಚಂದನ  ಗಂಧಿಯೆ । ನಂದ ನಂದನ ಶಾಮ
ಸುಂದರವಿಠಲನ್ನ ಸಂದರುಶನವೀಯೆ ೩

೧೪

ಇಂದಿರೇಶ ಬಂದು ಕಾಯೋ ಸಿಂಧು ಶಾಯಿವಾಸುದೇವ
ನೊಂದೆನಯ್ಯ ತಾಪತ್ರಯದಿ । ಪಾಲಿಸಯ್ಯ

ಹರಿಯೇ ಪಾಲಿಸಯ್ಯ ಪ

ಧ್ಯಾನ ವರಿಯೆ ಜ್ಞಾನವರಿಯೆ । ಮೌನವರಿಯೆ ನಾ

ದೀನ ಬಂಧು ನೀನೆ ಎಂದು ।

ನಾನಂಬಿದೆ ಹರಿಯೆ ನಾನಂಬಿದೆ ೧

ಸಾರವೆಂಬೊ ಸಂಸಾರ । ಶರಧಿಯಲ್ಲಿ ಮುಳುಗಿರುವೆ

ಪಾರುಗಾಣದೆ ಬಾಯಿ ಬಿಡುವೆ

ನಾರಾಯಣ ಶ್ರೀಮನ್ನಾರಾಯಣ ೨

ಆಸೆಯೆಂಬ ಪಾಶಕಡಿಯೊ । ದಾಸನೆಂದು ನೀ ಎನ್ನ ।

ದೋಷದೂರ ಶಾಮಸುಂದರ ।

ಪೋಷಿಸಯ್ಯ ಹರಿಯೆ ಪೋಷಿಸಯ್ಯ ೩

೧೫

ಇಂದು ನಿನ್ನ ಪಾದಕಮಲವಾ । ಪೊಂದಿದೆ ದೇವಾ ಪ

ನಂದಸುತ ಪುರಂದರಾನುಜ । ಸಿಂಧೂರ ವರಪೋಷಕ ಸುರ

ವೃಂದ ವಿನುತ ಇಂದಿರೇಶಾ ಅ.ಪ

ಪಿತನೆ ನಿನ್ನ ಒಮ್ಮೆ ನೆನೆಯದೆ । ಮತಿಹೀನನಾಗಿ

ಸ್ಮೃತಿ ಪುರಾಣ ಕಥೆಯ ಕೇಳದೆ ।

ವಿತತ ಮಹಿಮ ಪತಿತ ನಾನಾದೆ

ಅತಿವೇಗದಿ ಎನ್ನನು ನೀ ಹಿತದಿ ಪಾಲಿಸು ಕ್ಷಿತಿಜೇಶನೆ ೧

ವಿಧಿಸುರೇಂದ್ರವಂದ್ಯ ನಗಧರ ಬಿಡದೆ ಸಲಹೊ

ಮದನವಿತ ನೀನಧಮ ದೈತ್ಯರ

ಮದವಳಿದು ಮುದದಿ ಒದಗಿದ
ಸುಧೆಯನು ಸುರರಿಗೆ ನೀ ದಯದಿಕ್ಕಿದ ಪದುಮನಯನಾ ೨
ಸಿಂಧುಶಯನ ಶಾಮಸುಂದರ ವಂದಿಸುವೆ
ಕಂದುಗೊರಳ ಸಖ ಶ್ರೀಮನೋಹರ
ಕಂದನೆಂದೀಮಂದಭಾಗ್ಯನ ತಂದೆಯ ಮರೆಯದೆ ನೀ
ಚಂದದೀ ಪೊರೆ ದಶಕಂಧರಾರಿ ೩

೧೬

ಇಂದು ಪವಮಾನ ಪಿಡಿಎನ್ನಕೈಯಾ ನಿನ್ನ ನಾ
ಪೊಂದಿ ಪ್ರಾರ್ಥಪೆನಯ್ಯಾ ಪ.
ಬಂಧನದೊಳು ನೊಂದೆನಯ್ಯ
ಮುಂದೆ ಸನ್ಮಾರ್ಗತೋರಿಸು ಜೀಯಾ । ಎನ್ನ
ಕುಂದುಗಳೆಣಿಸದಿರಯ್ಯಾ ಗುರು
ಗಂಧವಾಹನ ವಜ್ರಕಾಯಾ ಅ.ಪ
ನಾನು ನನ್ನದು ಎಂಬ ಮದ ಬಿಡಿಸೊ
ಜ್ಞಾನ ಭಕ್ತಿ ವಿರಕ್ತಿ ಕೊಡಿಸೊ
ಜಾನಕಿಪತಿ ಪದದಿ ಮನ ನಿಲಿಸೊ
ಸಾನುರಾಗದಿ ಸತತ ಉದ್ಧರಿಸೊ ೧
ನಿನ್ನ ದಯದಿಂ ರವಿಜ ಭಯ ಕಳೆದಾ
ನಿನ್ನ ವಲಿಮೆಲಿ ಪಾರ್ಥ ಜಯ ಪಡೆದಾ
ನಿನ್ನ ನಂಬದೆ ರಾವಣನು ತಾ ಮಡಿದಾ ೨

ಶ್ರೀಮದಾನಂದತೀರ್ಥ ಮಧ್ವೇಶಾ
ಶಾಮಸುಂದರ ಸ್ವಾಮಿ ನಿಜದಾಸಾ
ಕಾವಿತಾರ್ಥಗಳಿತ್ತು ಪೊರೆ ಅನಿ ಶಾ ೩

೧೬

ಉದ್ಧಾರ ಮಾಡೆಯ್ಯಾ ಸಿದ್ಧೇಶ್ವರ । ಸದ್ಧರ್ಮದಲಿ ಸತತ
ಶುದ್ಧಮನವನು ಕೊಟ್ಟು । ನೀಲಲೋಹಿತ ವಿಗತ
ಚೈಲ ಭೂಷಿತ ಭನಿಸಿತ ಕಾಲಾರಿ ಶಿವ ದ್ರೌಣಿಂ ಶೂಲಪಾಣಿ
ಹಾಲವಿಷುರವಾಸ । ಹಾಲಾ ಹಲವ ಮೆದ್ದು ತಾಳಲಾರದೆ
ಕೊಂಡ ಮೇತೌಷಧವನಿತ್ತು ೧
ವ್ಯಾಧ ರೂಪದಿ ರಣದಿ ಕಾದು ಪಾರ್ಥನೆ ಸೋತು
ನೀ ದಯದಿ ದಿವ್ಯಾಸ್ತ್ರ ಪಾಲಿಸಿದೆಯೋ । ಸಾದರದಿ
ನಾ ನಿನ್ನ ಪಾದಕೆರಗುವೆ । ಎನಗೆ ಮೋದದಿಂದಲಿ
ಪಂಚಭೇದ ಜ್ಞಾನವನರುಹಿ ೨
ಕಾಮಾರಿ ಸುಪವಿತ್ರ ಸೋಮಾರ್ಕ ಶಿಖಿನೇತ್ರ
ಶಾಮಸುಂದರ ವಿಠಲಸ್ವಾಮಿ ಮಿತ್ರ । ಪ್ರೇಮಾಬ್ಧಿ
ಸುಚರಿತ್ರ । ಹೈಮವತಿ ಕಳತ್ರ । ತಾಮರಸ
ಭವಪುತ್ರ ಧವಳಗಾತ್ರ ೩

೧೭

ಉರುಟಣಿಯಾ ಸರಸಿಜನಾಭಾಗ್ದುರುಷದಲಿ ಮಾಡುವೆನಾ ಪ

ಶಂಖಚಕ್ರಧರಾ ವೆಂಕಟೇಶ ನಿಮಗೆ ।

ಕುಂಕುಮ ಹಚ್ಚುವೆ ಪಂಕಜಾಕ್ಷಿ ನಾ ೧

ನಂದಗೋಪಿಕಂದ ಹಚ್ಚುವೆ ಗಂಧ

ಹಚ್ಚುವೆ ಸುಗಂಧ । ಮುಕುಂದಗೆ ೨

ಯಶೋದೆಯ ಬಾಲಾ ಕಾಮಿತಶೀಲಾ

ಹಾಕುವೆನು ಮಾಲಾ ಗೋಪಾಲಗೆ ೩

ಪೊಡವಿ ಪಾಲಿಪಾ । ಕಡಲಶಯನಾ ।

ಕೊಡುವೆನು ವಿಡಾ ಪಿಡಿ ಬೇಗನೆ ೪

ಪೊಡವಿ ಪಾಲಿಪಾ ಕಡಲಶಯನಾ ।

ಶಾಮಸುಂದರವಿಠಲಾಗೆ ಬೇಗ ।

ವಂದಿಸಿ ಪ್ರಾರ್ಥನೆಗೈಯುವೆನಾ ೫

೧೭

ಶ್ರೀ ಭಾರತೀದೇವಿ

ಎಂತು ನೀವಶವಾದಿಯೇ ಭಾರತಿದೇವಿ

ಎಂತು ನೀ ಮರುಳಾದಿಯೆ ಪ

ಎಂತು ನೀವಶವಾದಿ । ಕಂತು ಹರನ ತಾಯಿ

ದಂತಿಗಮನೆ ದಮಯಂತಿ ಕಾಂತಸುತೆ ಅ.ಪ

ಧರೆಯೊಳು ಪುಟ್ಟುತಲಿ । ಆಕಾಶಕ್ಕೆ ಭರದಿಂದ ಜಿಗಿಯುತಲಿ

ಸರಸಿಜ ಸಖನಾದ । ತರಣಿಯ ಫಲವೆಂದು

ಅರಿತು ಭಕ್ಷಿಸಲ್ಪೋದ । ತರು ಚರ ರೂಪಿಗೆ ೧

ಪುಂಡರೀಕಾಕ್ಷ ಕೇಳಿ । ದ್ವಾಪರದಿ ಪ್ರಚಂಡಗೆ ಒಲಿಯುತಲಿ
ಭಂಡ ಬಕನ ಶಿರದಿಂಡು ಗೆಡಹಿ ಅವನ
ಭಂಡಿ ಓದನವನ್ನು ಉಂಡ ಪುಂಡಗೆ ಮಾತೆ ೨
ಶ್ರೀ ಶಾಮಸುಂದರನೇ ತ್ರೈಲೋಕ್ಯಕ್ಕೆ ಈಶನೆಂಬುದು ತಾನು
ಲೇಸಾಗಿ ಪೇಳಲು । ಲೇಶವಾದರು ನಿನ್ನ
ಆಶೆ ಇಲ್ಲದೆ ಸನ್ಯಾಸಿ ಆದವನಿಗೆ ೩

೧೮

ಎಂಥ ಕರುಣಿಯೋ । ಐಕೂರು ಗುರುಗಳೆಂಥ ಸುಗುಣಿಯೋ
ಎಂಥ ಪರಮ ಕರುಣಿಯೋ ಇವ
ರೆಂಥ ಸುಗುಣ ಶಾಲಿಯೋ ಸು
ಸ್ವಾಂತದಿ ಏಕಾಂತದಿ ಶ್ರೀಕಾಂತನ ಪದಕ್ರಾಂತ
ಶಾಂತರಂತಃಕರುಣಿಯೋ ಅ.ಪ
ವಸುಧಿ ತಳದಲಿ ಶ್ರೀಶನಾಜ್ಞೆಯಿಂದ
ಶಶಿಯುಮತದಲಿ ಬಂದು । ಸುನಿತ ಮನದಲಿ
ವಸುಮತಿ ಸುಶಾಸ್ತ್ರಧರ್ಮ । ನಿಶಿಹಗಲಾಚರಿಸಿ ಶಿಷ್ಯ
ನಿಕರುಪದೇಶಿಸಿ ಭವ । ಘಸಣೆ ಕರೆದು ಕುಶಲಗರೆದ ೧
ಎಷ್ಟು ಹೇಳಲಿ ಇವರು ನಿತ್ಯ । ಕೃಷ್ಣತಟದಲಿ ಮಿಂದು
ಉತ್ಕೃಷ್ಟ ಭಕುತಿಲಿ
ದೃಷ್ಟಿನಾಶಿಕಾಗ್ರದಲ್ಲಿ ಇಟ್ಟು ಬಿಂಬ ಮೂರ್ತಿಯ ಮನ
ಮುಟ್ಟಿ ಪಾಡಿ ನೋಡಿ ಕುಭವ ದಟ್ಟುಳಿಯನಿಟ್ಟವರು ೨

ಜ್ಞಾನ ಶೀಲರು ದಾಸಕವನ । ಗಾನಲೋಲರು
ನೆರೆನಂಬಿದಂಥ ದೀನಪಾಲರು
ಶ್ರೀನಿಧಿವರ ಶಾಮಸುಂದರ । ಧ್ಯಾನಾಮೃತಪಾನಗೈದು
ಕ್ಷೋಣಿ ಮಂಡಲದಿ । ಮದಿಸಿದಾನೆಯೆಂತೆ ಚರಿಸಿದವರು ೩

೧೮

ಎಂಥ ದಯವಂತನೋ । ಮಂತ್ರ ಮುನಿನಾಥನೊ
ಸಂತಸದಿ ತನ್ನನು । ಚಿಂತಿಪರಿಗೆ ಸುರಧೇನು ಪ
ವರ ಪ್ರಹ್ಲಾದನು । ಮರಳಿ ಬಾಹ್ಲೀಕನು ।
ಶ್ರೀ ಗುರುವ್ಯಾಸರಾಯನೊ । ಪರಿಮಳಾಚಾರ್ಯನೊ ೧
ಇರುವ ತುಂಗಾತಟದಲ್ಲಿ । ಬರುವ ತಾನು ಕರೆದಲ್ಲಿ
ಕರಪಿಡಿದು ಪೊರೆವಲ್ಲಿ ಸರಿಗಾಣೆ ಧರೆಯಲ್ಲಿ ೨
ಮರುತಾವೇಶಯುಕ್ತನು । ದುರಿತ ಕಳೆವ ಶಕ್ತನು
ತರಣಿ ನಿಭಗಾತ್ರನು । ಪರಮಸುಚರಿತ್ರನು ೩
ಶಿಶುವಿಗವ್ರುಗರೆದನು । ವಸುಧಿ ಸುರರ ಪೊರೆವನು
ಅಸಮ ಮಹಿಮನೊ । ಸುಶೀಲೇಂದ್ರ ವರದನೊ ೪
ಭೂಮಿಯೊಳು ಖ್ಯಾತನು । ಶಾಮಸುಂದರ ಪ್ರೀತನು
ಕಾಮಿತಾರ್ಥದಾತನು । ಸ್ವಾಮಿ ನಮಗೆ ಈತನು ೫

೧೯

ಎಂದು ಕಾಂಬೆನು ನಂದ ಗೋಪನ । ಕಂದ ಶ್ರೀ ಗೋವಿಂದನ

ಮಂದರಾಚಲಧರ ಶ್ರೀಯದುಕುಲ । ಚಂದ್ರಗುಣಸಾಂದ್ರ
ವಿಜಯಸೂತನ ವಿಶ್ವಪಾಲನ । ಭುಜಗವರ ಪರಿಯಂಕನ
ರಜನಿಚರರಳಿದ ಜನ ಜನಕನ । ಶ್ರೀ ಜಗಪತಿ ದ್ವಿಜವರಗಮನನ ೧
ಪಾಲುದಧಿ ನವನೀತ ಚೋರನ ಬಾಲಕೃಷ್ಣ ಗೋಪಾಲನ
ಶೈಲ ಬೆರಳಿಲಿ ತಾಳಿ ಗೋಕುಲ ಪಾಲಿಸಿದ ಪರಮಾತ್ಮನ ೨
ಭಾಮೆ ರುಕ್ಮಿಣಿ ರಮಣ ರಂಗನ ಸಾಮಗಾನ ವಿಲೋಲನ
ಶ್ರೀಮದಾನಂದ ಮುನಿಕರಾರ್ಚಿತ ಶಾಮಸುಂದರ ವಿಠಲನ ೩

೨೦

ಆತ್ಮನಿವೇದನೆ ಮತ್ತು ಲೋಕನೀತಿ
ಎನಗ್ಯಾಕೆ ಕವಿಯೆಂಬ ಶ್ರೇಷ್ಠನಾಮಾ
ಜನರೊಳಗೆ ನಾನೋರ್ವ ಮನಜಾಧಮ ಪ
ಸ್ನಾನ ಜಪ ತಪ ಮೌನ ಧ್ಯಾನ ವರಮಂತ್ರಗಳ
ಋೂನವಿಲ್ಲದೆ ಜ್ಞಾನ ಹೀನನಾಗಿ
ಏನು ಹೇಳಲಿ ದುಷ್ಟ ಮಾನಿನಿಗೆ ಮನಸೋತು
ಶ್ವಾನನಂದದಿ ದಿನವ ನಾ ನೂಕಿದವನಯ್ಯ ೧
ಹತ್ತೆರಡು ಮತ್ತೈದು ಗಾತ್ರದೊಳು ಧರಿಸದಲೆ
ಸೋತ್ತುಮರ ಸತ್ಯಂಗನವು ಮಾಡದೆ
ಚಿತ್ತ ಚಂಚಲನಾಗಿ ಲೆತ್ತ ಪಗಡಿಗಳಾಡಿ
ಕತ್ತೆಯಿಂದದಿ ವ್ಯರ್ಥ ಹೊತ್ತು ಕಳೆದವ ನಾನು ೨
ನೇಮಪೂರ್ವಕ ಒಂದು ಯಾಮವಾದರು ಮನದಿ
ಶಾಮಸುಂದರ ಧ್ಯಾನ ಮಾಡದೆ

ಕಾಮಾರಿ ಷಡ್ವೈರಿ ಸ್ತೋಮಕ್ಕೆ
ಭೂಮಿಯೊಳು ಜಡವಾದ ನಾಮದಲಿ ಚರಿಸುವೆನು ೩

೨೧

ಏಕೆ ನೀಮರುಳಾದೆ ನಾಕೇಶ ವಿನುತೆ । ರ
ತ್ನಾಕರನ ತಾಯೆ ಪ
ಗೋಕುಲದೊಳಿದ್ದು । ಆಕಳ ಕಾಯ್ದಗೆ
ಲೋಕಪಾವನೆ ಸಿರಿಯೆ ಅ.ಪ
ನೀರೊಳಗೆ ಇದ್ದು ನಗಭಾರ ಬೆನ್ನಲಿಪೊತ್ತು
ಬೇರು ಮೆಲ್ಲುವನಿಗೆ ।
ಚೀರಿ ಕಂಭದಿ ಬಂದು । ಘೋರ ರೂಪದಿ ಬಲಿ ದ್ವಾರ ಕಾಯ್ದುವಗೆ ।
ವೀರ ನೆನಿಸಿ ಪೆತ್ತ । ನಾರಿಯ ಶಿರವ ಸಂ
ಹಾರಮಾಡಿದವಗೆ ।
ಭೂರುಹಚರ ಪರಿವಾರ ದೊಳಗಿದ್ದು ದಧಿ
ಚೋರನೆನಿಸಿದವಗೆ ೧
ಸಂದೇಹವಿಲ್ಲದೆ ವಸನ  ತ್ಯಜಿಸುತ
ಬಂದು ನಿಂದವನಿಗೆ ।
ಇಂದಿರಾಧವ ನಿನ್ನ ಹಿಂದೆ ಬಂದವನ
ಅಂದು ಕೊಂಡವನಿಗೆ ।
ಕುಂದರದನೆ ನಿನ್ನ ಪೊಂದದೆ ಛಂದದಿ
ಕಂದರ ಪಡೆದವಗೆ ೨

ಜಾತಿಯನರಿಯದೆ ಶಬರಿಯ ಎಂಜಲ
ಪ್ರೀತಿಲಿ ಉಂಡವಗೆ
ಶ್ವೇತವಾಹನಜಗೆ ತಾ ಸೂತನೆಂದೆನಿಸುತ
ಖ್ಯಾತಿ ಪಡೆದವಗೆ
ನೀತಿ ಇಲ್ಲದೆಯ ಮಾತೆಯ ಅನುಜನ
ಘಾತಿಸಿದಾತನಿಗೆ ॥
ವಾತಾಶನವರ ತಲ್ಪದೊಳು ಮಲಗಿದ
ಶಾಮಸುಂದರ ಧೊರೆಗೆ ೩

೨೨

ಏನು ಧನ್ಯರೋ ಜಗದಿ ಎಂಥ ಮಾನ್ಯರೋ ।
ಕ್ಷೋಣಿ ವಿಬುಧ ಶ್ರೇಣಿ ನಮಿಪ
ಮೌನಿ ಶ್ರಿ ರಘುಪ್ರೇಮತೀರ್ಥರು ಪ
ಕಲಿಯುಗದಿ ಕ್ರತುಗೈದ ಇಳಿಯ ಜನಕ ಸಾಧ್ಯವೆಂದು
ತಿಳಿದು ನಾಕದಿಂದಳಿದು ಬಂದು
ಕುಲಿಶಪಾಣಿಯಂತೆ ತೋರ್ಪರು ೧
ಧೂರ್ತರಿಂದ ದೂರವಿದ್ದು । ಸ್ವಾರ್ಥರಹಿತರಾಗಿ । ಸಕಲ
ತೀರ್ಥಕ್ಷೇತ್ರ ಚರಿಸಿ ಜನ್ಮ ಸಾರ್ಥಕೆನಿಸಿದ ಯತಿಯು ೨
ಧನ ಧಾನ್ಯ ಭರಿತ ಸದನ ತೃಣಸಮಾನವೆನಿಸಿ ಮುದದಿ ।
ವಿನಯಶೀಲ ದ್ವಿಜರಿಗಿತ್ತು ಮುನಿಯೆನಿಸಿ ವಿರುಕ್ತರು ೩
ಚತುರಾಶ್ರಮ ವ್ರತದಿ ನೇಮ ಸತತಾ ಚರಿಸುತಲಿ ।

ಶಿಷ್ಯರಾದಿಗೆ ವ್ರತಬೋಧವೃಷ್ಟಿ ಹಿತದಿಗರೆದು
ಪೊರೆವ ಯತಿಯು ೪
ಶ್ರೀಮಧ್ವಸುಮತವಾರಿಧಿ ಸೋಮನೆಂದೆನಿಸಿ ।
ಜಿತ ಕಾಮರಾಗಿ ಕಠಿಣ ತಪದಿ । ಶ್ರೀ ।
ಶಾಮಸುಂದರನ ಒಲಿಸಿದವರು ೫

೨೩

ಏಳಯ್ಯ ಸದ್ಗುರುರಾಯ । ಈಗ
ಏಳು ತುರಗ ಸೂತನುದಯಿಸುವ ಸಮಯ ಪ
ಎದ್ದು ಶಿಷ್ಯರ ಕರೆಯಬೇಕು । ಗುರು
ಮಧ್ವಮತದ ತತ್ವ ಭೋಧಿಸಬೇಕು
ಇದ್ದ ದೋಷವ ಕಳೆಯಬೇಕು ಪರಿ
ಶುದ್ಧರ ಮಾಡಿ ನೀನುದ್ಧರಿಸಬೇಕು ೧
ಶೌರಿಕಥಾಮೃತ ಸಾರೋದ್ಧಾರ । ಭಾಗವತ ಶಾಸ್ತ್ರವಿಚಾರ
ಮುರೆರಡು ವಿಧ ಭೇದ ತಾರತಮ್ಯ
ಸಾರುತ ಸಲಹೋ ಶಿಷ್ಯಪರಿವಾರ ೨
ಪದಸುಳಾದಿಗಳ ಕೇಳಬೇಕು । ಕೇಳಿ
ಅದರೊಳಿರುವ ತತ್ವವಿವರಿಸಬೇಕು
ಮದಡತನವ ಕಳೆಯಬೇಕು ನಿನ್ನ
ಪದ ನಂಬಿದವರಿಗೆ ಮುದಗರಿಯ ಬೇಕು ೩
ಸತ್ಯನಾರಾಯಣ ಕಥೆಯ । ಬಹುವಿಸ್ತಾರವಾಗಿ

ನೀ ಬಿತ್ತರಿಸಯ್ಯ । ಭೃತ್ಯರಾ ಮಾಯೆ
ಓಡಿಸಯ್ಯ ಅಜ್ಞಾನ
ಜ್ಞಾನ ಭಕ್ತಿ ವೈರಾಗ್ಯ ಸಂಪತ್ತು ನೀಡಯ್ಯ ೪
ಒಂದೂರು ನಿಲಯನೆ ಏಳೊ ಶಾಮ
ಸುಂದರವಿಠಲನ ಮಂದಿರನಾಳೋ
ಬಂದ ನಿಂದೆಗಳೆಲ್ಲ ಹೂಳೋ ನಿನ್ನ
ಪೊಂದಿದ ನಮ್ಮನ್ನು ಅಗಲಿದೆ ಆಳೊ ೫

೨೪

ಕಂಡೆ ನಾ ಕಣ್ಣಾರೆನಾ । ಕಂಡೆನಾ ಪ
ಕಂಡೆನು ಕರುಣಾಸಾಗರನ । ಕರ
ದಂಡ ನಾಮಕೊಲಿದವನ । ಆಹಾ
ದಂಡ ಧಂಡದ ಲೀಲೆ ತೋಂಡರೊಡನಾಡು
ಫಂಢರಿಪುರವಾಸ । ಪಾಂಡುರಂಗನ ಮೂರ್ತಿ ೧
ತಟಿಟತಮತ್ಕೋಟಿ ಸನ್ನಿಭನ । ದೇವ ।
ತಟಿನಿಯು ಪದದಿ ಪೆತ್ತವನ । ಚಾರು
ಕಟಿಯಲ್ಲಿ ಕರವ ನಿಟ್ಟವನ । ನಿಜ
ಭಟ ಜನರಿಗೆ ಮುಕ್ತಿ ಪ್ರದನ ॥ಆಹಾ ॥
ಜಠರದಿ ಜಗವಿಟ್ಟು ವಟದೆಲೆಯೊಳು ಮಲಗಿ
ವಟುರೂಪದಲಿ ಪಾದಾಂಗುಟವನು ಮೆಲುವನ ೨
ಭುವನದೊಳು ಸಂಚರಿಸುವನ । ಕೂರ್ಮ

ಕುವರ ಮಾನವ ಪಂಚಮುಖನ । ಋಷಿ
ಕುಮಾರ ಕುವರರ ಕಡಿದವನ ಮಹಿ
ಕುವರಿಯ ಕರವ ಪಿಡಿದವನ । ಆಹಾ
ಕುವಲಯ ಸಖ ಕುಲೋಧ್ಭವ ಭವಮಾರ್ಗಣ
ಬವರದಿ ಹಯವೇರಿ ಯವನರ ಬಡಿದನ ೩
ನಿಗಮಗಳಿಗೆ ಸಿಗದವನ । ನಾ
ಲ್ಮೊಗನ ನಾಭಿಲಿ ಪಡೆದವನ । ರವಿ
ಮಗನಿಗೆ ಮಗನಾದವನ ತನ್ನ
ಪೊಗಳುವಂಥರಘ ಕಳೆಯುವವನ ಆಹಾ
ಜಗನ್ನಾಥದಾಸರಿಗೆ । ಸೊಗಸಾದ ಮೃಷ್ಟಾನ್ನ
ಬಗೆ ಬಗೆ ಉಣಿಸಿದ ಖಗಪತಿ ಗಮನನ ೪
ಸಾಸಿರನಯನನುಜನ । ಮಹಿ
ದಾಸ ಕಪಿಲದತ್ತಾತ್ರೇಯನ ವೇದ
ವ್ಯಾಸ ವೃಷಭ ಹಯಮುಖನ ಭಾರ
ಶ್ರೀಶ ಮಾನಸಮಂದಿರ ॥ಆಹಾ ॥
ಶ್ರೀಶ ತಂದೆ ವೆಂಕಟೇಶ ವಿಠಲಂಘ್ರಿ
ದಾಸರ ಸತ್ಯಹವಾಸದಿಂದಲಿಯಿಂದು ೪
ತಂದೆ ತಾಯ್ಗಳ ಸುಕೃತವೊ । ನಮ್ಮ
ಒಂದೂರಾರ್ಯರ ಅನುಗ್ರಹವೋ । ಸ್ತಂಭ
ಮಂದಿರ ರಾಯರ ದಯವೊ । ದಾಸ
ವೃಂದ ಕೃತಾಶೇಷ ಫಲವೊ । ಆಹಾ
ಇಂದು ಭಾಗದಿ ಭಕ್ತಾವೃಂದಕೆ ದರುಶನಾ

ನಂದಗರೆವ ಶಾಮಸುಂದರ ವಿಠಲನ ೫

೨೫

ಋತು ಜನಕ ಶ್ರೀಕಾಂತನ ಸ್ತುತಿಸಲ
ನಂತನಿಗಸದಳವ್ವೈ ಪ
ದಂತಿಚರ್ಮಧರಾಧ್ಯರು ಈತನ
ಅಂತುಗಾಣದಲೆ ಚಿಂತಿಪರ್ರೈ ಅ.ಪ
ಮಾವನ ಮಥಿನಿದ ಮಾವನಿಗೊಲಿದ
ಮಹರಾಯನವನು ।
ಮಾವನ ಮಗನ ಮೋಹದ ಮಗಳಿಗೆ
ಮಾವನೆನಿಸಿದವನು
ಮಾವನ ತಮ್ಮಗೆ ತನ್ನಯ ಭಕುತನ
ಮಹಿಮೆ ತೋರಿಸಿದನು ॥
ಮಾವನ ತನಯರ ಪರಿ ಪರಿ ಪೊರೆದನು ಉ
ಮಾವಲ್ಲಭನುತ ನಗಧರನಿವನು ೧
ಸತಿಯ ಪಿತನ ಪೆತ್ತನ ಮಾತೆಗೆ
ಪತಿಯಾದವ ನಿವನು ।
ಸತಿಯಳ ಪಿಡಿದೊಯ್ದಾತನ ಭ್ರಾತನ
ಸುತನ ಪಾಲಿಸಿದನು
ಸತಿಯ ಪಡೆದವಳ ಸುತನ ಮರ್ದಿಸಿ
ಸತಿಯರ ಕೂಡಿದನು ।
ಸತಿಗೆ ಕೊಟ್ಟ ವರ ಹಿತದಿ ನೀಡಲು

ಸತಿಯನ್ನಗಲಿದ ಶತಕ್ರತು ವಂದ್ಯನು ೨

ಕಾಲುರಹಿತ ಕೈಕಾಲು ಮುದುರುವ

ಕೋಲರೂಪಿ ಇವನು

ಕಾಲನಂತೆ ಘನ ಕೋಪಿಯಾಗಿ ನದಿ

ಕಾಲಲಿ ಪಡೆದವನು

ಕಾಲಕ್ಷತ್ರಿಯರ ತಾ

ಬಾಲೆಯ ಸಲಹಿದನು

ಕಾಳಿವೈರಿ ಶ್ರೀ ಶಾಮಸುಂದರ

ಕಾಲಕಾಲ ನಖ ಸಖ ಕಲಿ ಭಂಜನನು ೩